ಪದ ಅವರ ಬಾಯಲ್ಲಿ ಸಾಯಿಬ್ಬ ಎಂದಾದುದು ಎಂಬುದಾಗಿ ನಾನು ತಿಳಿದಿದ್ದೆ. ಶಾಲಾ ಹುಡುಗರ ಅಜ್ಞಾನಕ್ಕೆ ಕನಿಕರಿಸಿ ಒಮ್ಮೆ ಸೇಸು ಪೂಜಾರಿ, ತನ್ನ ಬಾಯಲ್ಲಿದ್ದ ಕವಳದ ರಸವನ್ನು ಬದಿಗೆ ಉಗಿದು, ಅವರು ಮನೆಯಲ್ಲಿ ಹಿಂದಿ ಮಾತನಾಡುವ ಮುಸ್ಲಿಂ; ಹಾಗಾಗಿ ಸಾಯಿಬ್ಬರು. ಮನೆಯಲ್ಲಿ ಮಲಯಾಳ ಮಾತನಾಡುವ ಬ್ಯಾರಿ ಮುಸ್ಲಿಂಮರಲ್ಲ ಎಂದು ಹೇಳಿದ್ದರು. ಎಷ್ಟೋ ವರುಷಗಳ ಬಳಿಕ ಅವರು ಮನೆಯಲ್ಲಿ ಮಾತನಾಡುತ್ತಿದ್ದುದು ಹಿಂದಿಯೋ, ಉರ್ದುವೋ, ದಖ್ಖನಿಯೋ ಯಾರಿಗೆ ಗೊತ್ತು? ಬಸ್ಸಿನಲ್ಲಂತೂ ಸಾಯಿಬ್ಬರು ಕನ್ನಡ, ಮಲಯಾಳಂ, ತುಳು, ಕೊಂಕಣಿ—ಎಲ್ಲಾ ಭಾಷೆ ಮಾತನಾಡುತ್ತಿದ್ದರು. ಇಂದಿನ ಬಹುಭಾಷಾ ಅಧ್ಯಯನ ತಜ್ಞರು ಅವರನ್ನು ನೋಡಿದ್ದರೆ ದಂಗಾಗುತ್ತಿದ್ದರು ಎಂಬುದರಲ್ಲಿ ಅನುಮಾನವಿಲ್ಲ.

ಮೈಲು ಬಸ್ಸು ಪುತ್ತೂರಿನಿಂದ ಕಾಸರಗೋಡಿನವರೆಗೆ ಅಲ್ಲಲ್ಲಿ ಊರುಗಳ ಪೋಸ್ಟಾಫೀಸುಗಳಿಗೆ ಟಪ್ಪಾಲುಗಳನ್ನು ನೀಡಿ, ಅಲ್ಲಿನ ಟಪ್ಪಾಲು ಚೀಲಗಳನ್ನು ಬಸ್ಸಿಗೆ ಏರಿಸಿಕೊಳ್ಳುತ್ತಿತ್ತು. ಪೋಸ್ಟು ಚೀಲಗಳನ್ನು ಎದುರಿನ ಡ್ರೈವರ್ ಬಳಿ ಬಾಗಿಲಲ್ಲಿ ನೀಡುತ್ತಿದ್ದರು. ಕಂಡಕ್ಟರ್ ಆಗ ಹಿಂದಿನ ಬಾಗಿಲಿನಲ್ಲಿ ಜನಗಳನ್ನು ಹತ್ತಿಸಿಕೊಳ್ಳುವ ಗಡಿಬಿಡಿಯಲ್ಲಿದ್ದರೆ, ಎದುರಿನ ಡ್ರೈವರ್ ಸಾಯಿಬ್ಬರೆ ಟಪ್ಪಾಲು ಚೀಲಗಳನ್ನು ಒಳಗೆ ಹಾಕುವ ಕೆಲಸ ಮಾಡಬೇಕಾಗುತ್ತಿತ್ತು. ಆಗ ಅವರಿಗೆ ಸಹಾಯ ಮಾಡಲು ಮುಂದೆ ಕುಳಿತಿದ್ದವರೆಲ್ಲಾ ತಯಾರಾಗುತ್ತಿದ್ದರು. ಹೀಗೆ ಸಹಾಯ ಮಾಡಿದ ಪ್ರಯಾಣಿಕರತ್ತ ನಗೆಬೀರಿ ಡ್ರೈವರ್ ಪಕ್ಕದ ಸೀಟಿನವರೊಡನೆ ಮಾತುಕತೆ ಶುರುವಾದರೆ ಅವರು ಇಳಿಯುವವರೆಗೂ ಪಟ್ಟಾಂಗ ಮುಂದುವರಿಯುತ್ತಿತ್ತು. ರಾಜಕೀಯ, ಜನಜೀವನ, ಸೀಮೆಗೆ ಬಂದ ಕಾಯಿಲೆ, ಊರ ಜಾತ್ರೆ, ಮದುವೆ ಮುಂಜಿ, ಕಷ್ಟ, ಸುಖ, ಒಂದೆ ಎರಡೆ.

ಅವರ ಪಟ್ಟಾಂಗ ಪ್ರಾರಂಭವಾಗುವ ವೈಖರಿಯೇ ಒಂದು ಸೊಗಸು. ಮಾತಿನ ಪೀಠಿಕೆ ತುಳು, ಕೊಂಕಣಿ, ಮಲಯಾಳ, ಕನ್ನಡ, ಹೀಗೆ ಪ್ರಯಾಣಿಕನ ಭಾಷೆ ಯಾವುದೋ ಅದರಲ್ಲಿ. ಏನು ಹೊಸ ಶಾಲು ಎಲ್ಲಾ ಹಾಕಿಕೊಂಡು ಮದುವೆಗೆ ಹೊರಟದ್ದೋ. ಅಥವಾ, ಕೈಯಲ್ಲೇನು ಉಡುಗೊರೆ ಸಾಮಾನಿನ ಹಾಗೆ ಉಂಟು. ಮದುವೆಗೋ. ಹೀಗಲ್ಲದಿದ್ದರೆ, ಏನು ಖಾಲಿಕೈ ಬೀಸಿಕೊಂಡು ಹೊರಟಿದ್ದೀರಿ. ಬ್ಯಾಗು, ಚೀಲ ಎಂತದೂ ಇಲ್ಲ. ಮದುವೆಗೋ ಹೇಗೆ? ಹೀಗೆ ಪಂಚಾಯ್ತಿಕೆ ಪ್ರಾರಂಭವಾದರೆ, ಎಲ್ಲಿ ಮದುವೆ, ಯಾರ ಮಗ, ಮಗಳು ಇತ್ಯಾದಿ ಇತ್ಯಾದಿ. ಸಾಮಾನ್ಯ ಆ ದಾರಿ ಸುತ್ತ ಡ್ರೈವರ್ ಸಾಯಿಬ್ಬರಿಗೆ ಗೊತ್ತಿಲ್ಲದವರು ಕಡಿಮೆ. ತೀರಾ ಪರಿಚಿತರಾದರೆ, ಹುಡುಗಿ ಕಡೆಯವರು ಪುತ್ತೂರಿನಲ್ಲಿ ಜವುಳಿ ತೆಗೆದು ನಮ್ಮ ಬಸ್ಸಲ್ಲೇ ವಾಪಸು ಬಂದದ್ದು. ಇದು ಬಿಡಿ. ಹುಡುಗಿಯ ಅಪ್ಪನ ಮದುವೆಗೆ ನನಗೆ ಕಾಗದ ಕೊಟ್ಟಿದ್ದರು. ಆದರೆ, ಏನು ಮಾಡುದು ಹೇಳಿ. ಇದು ಟಪಾಲಿನ ಡ್ಯೂಟಿ ಬಸ್ಸು ಅಲ್ಲವಾ? ಸರ್ಕಾರಿ ಡ್ಯೂಟಿ. ಹಾಗೆಲ್ಲಾ ರಜೆ ಹಾಕಿ ಮದುವೆಗೆ ಹೋಗಲಿಕ್ಕೆ ಆಗ್ತದಾ? ನನ್ನ ಮಗಳ ಮದುವೆಗೆ ಒಂದು ವಾರ ರಜಾ ಹಾಕ್ಲಿಕ್ಕೆ ಸಾಕು ಬೇಕಾಯಿತು ನೋಡಿ. ಹೀಗೇನಾದರೂ ಮಾತು. ಆಗ ಸುತ್ತಲಿನ ಪ್ರಯಾಣಿಕರು, ಅಲ್ಲಾ ಸಾಯಿಬ್ಬರೆ. ಹಾಗೆ ಡ್ಯೂಟಿ ಬಿಡ್ಲಿಕ್ಕೆ ಆಗುತ್ತದೋ ಅಂತ ಕೇಳಿದರೆ, ಸಾಯಿಬ್ಬರು ಒಮ್ಮೆ ಅಂಗಿ ಕೈ ಎಳೆದು ಪುನಃ ಸ್ಟಿಯರಿಂಗ್ ಹಿಡಿದುಕೊಂಡು, "ಅಲ್ಲಾ. ಕರೆದವರಿಗೂ ಬೇಜಾರು ಆಗದ ಹಾಗೆ ಕಂಡಾಗ ಹೇಳ್ಬೇಕು ನೋಡಿ." ಎನ್ನಬೇಕು. ಆಮೇಲೆ ಡ್ರೈವರ್ ಸಾಹೇಬರು, "ಮುಂದಿನ ತಿಂಗಳು ನನ್ನ ತಂಗಿ ಮಗನ ಮದುವೆ. ರಜೆ ಬೇಕು ಅಂತ ದನಿಗಳ ಹತ್ತಿರ ಹೇಳಿ ಹದಿನೈದು ದಿನ ಆಗಿದೆ. ಇನ್ನೂ ಕಾಯಲ್ಲಿ ನೀರು ಮೊಗಚಲಿಲ್ಲ." ಹೀಗೇನಾದರೂ ಕಷ್ಟ ಸುಖ ಹೇಳಬೇಕು. ನೀರು ಮೊಗಚಲಿಲ್ಲ ಎಂದರೆ ಉತ್ತರ ಸಿಕ್ಕಿಲ್ಲ ಅಂತ. ಬೆಳೆದ ತೆಂಗಿನಕಾಯಿಯಲ್ಲಿ ಒಳಗಿರುವ ನೀರಿಗೆ ಸದ್ದು. ಬೆಳೆಯದ ಕಾಯಿಯಲ್ಲಿ ಇನ್ನೂ ನೀರಿನ ಸದ್ದು ಇಲ್ಲ.

ಮದುವೆ ಸುದ್ದಿ ಇಲ್ಲದಿದ್ದರೆ ರಾಜಕೀಯ. ಪೇಪರಿನಲ್ಲಿ ಏನು ಸುದ್ದಿ. ಯಾವ ರಾಜಕೀಯ ನಾಯಕ ಏನು ಹೇಳಿದ. ಎಸ್ಸೆಂಬ್ಲಿಯಲ್ಲಿ ಯಾರು ಭಾಷಣ

